## ಮೇಣದ ಬತ್ತಿ ತಯಾರಿಕೆ







ನಮ್ಮ ದಿನನಿತ್ಯದ ಬಳಕೆಯ ಸಾಮಗ್ರಿಗಳಾದ ಮೇಣದ ಬತ್ತಿ, ಸೋಪ್, ಫಿನೈಲ್, ಅಗರಬತ್ತಿ ಮುಂತಾದ ವಸ್ತುಗಳನ್ನು ನಾವು ಮಾರುಕಟ್ಟೆಯಿಂದ ತಂದು ಉಪಯೋಗಿಸುತ್ತಿದ್ದು, ಆ ವಸ್ತುಗಳನ್ನು ನಾವು ಮನೆಯಲ್ಲಿಯೇ ತಯಾರಿಸಬಹುದು. ಇದರಿಂದ ಹಣದ ಉಳಿತಾಯ ಅಗುವುದರ ಜೊತೆಗೆ ಮನೆ ಸದಸ್ಯರಿಗೆ ಉಪಕಸುಬು ಸಹ ದೊರೆತಂತಾಗುತ್ತದೆ.

ಬೇಕಾಗುವ ಸಾಮಗ್ರಿಗಳು: ಅಚ್ಚು 01, ಪ್ಯಾರಾಫಿನ್ ಮೇಣ 500 ಗ್ರಾಂ., ಕೊಬ್ಬರಿ ಎಣ್ಣೆ 100 ಗ್ರಾಂ., ದಾರ 3 ಮೀಟರ್

ವಿಧಾನ: ಮೊದಲಿಗೆ ಅಚ್ಚಿನ ಎರಡೂ ಬದಿಗಳಲ್ಲಿ ಸರಿಯಾಗಿ ಕೊಬ್ಬರಿ ಎಣ್ಣೆಯನ್ನು ಸವರಬೇಕು ನಂತರ ದಾರವನ್ನು ಮಧ್ಯಭಾಗದಲ್ಲಿ ಬರುವಂತೆ ಸುತ್ತಿ ಬೋಲ್ಟ್‌ನ ಸಹಾಯದಿಂದ ಅಚ್ಚನ್ನು ಭದ್ರಪಡಿಸಬೇಕು. ಮೇಣವನ್ನು ಪಾತ್ರೆಯಲ್ಲಿ ಹಾಕಿ ಕಾಯಿಸಿ ನೀರಿನಂತದಾಗ ಅಚ್ಚಿನಲ್ಲಿ ಹಾಕಬೇಕು. ಮೇಣ ಆರಲು 7–8 ತಾಸು ತೆಗೆದುಕೊಳ್ಳುತ್ತದೆ. ಮೇಣ ಗಟ್ಟಿಯಾದ ನಂತರ ಅಚ್ಚಿನ ಬೋಲ್ಟ್‌ನ್ನು ಬೇರ್ಪಡಿಸಿ ಮೇಣದ ಬತ್ತಿಯನ್ನು ಹೊರ ತೆಗೆಯಬೇಕು. ಹೆಚ್ಚಿನ ಪ್ರಮಾಣದಲ್ಲಿ ಹೊರಗೆ ಇರುವ ದಾರವನ್ನು ಕತ್ತರಿಯಿಂದ ಕತ್ತರಿಸಿ ಮೇಣದ ಬತ್ತಿ ಅಂದವಾಗಿ ಕಾಣಲು ಬಣ್ಣದ ಪ್ಲಾಸ್ಟಿಕ್ ಹಾಳೆಯಿಂದ ಸುತ್ತಬೇಕು.

## ಪಶು ಆರೋಗ್ಯ ತಪಾಸಣಾ ಶಿಬಿರ





ದಿನಾಂಕ 22.11.2009 ರಂದು ನೆರೆ ಪೀಡಿತ ಮುಷ್ಟೂರು ಗ್ರಾಮದಲ್ಲಿ ಜಾನುವಾರುಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಕಾಲುಬಾಯಿಜ್ವರದ ಲಸಿಕಾ ಶಿಬಿರವನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಮತ್ತು ಪಶುಪಾಲನಾ ಇಲಾಖೆ, ರಾಣೇಬೆನ್ನೂರು ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀ ರವೀಂದ್ರಗೌಡ ಎಫ್. ಪಾಟೀಲ ಮಾಜಿ ತಾಲೂಕು ಪಂಚಾಯತ್ ಅಧ್ಯಕ್ಷರು, ಶಿಬಿರದ ಸದುಪಯೋಗ ಮಾಡಿಕೊಳ್ಳುವಂತೆ ಊರ ನಾಗರಿಕರಿಗೆ ತಿಳಿಸಿದರು. ಡಾ. ಪರಮೇಶ ಎನ್. ಹುಬ್ಬಳ್ಳಿ, ಸಹಾಯಕ ನಿರ್ದೇಶಕರು, ಪಶುವೈದ್ಯ ಆಸ್ಪತ್ರೆ, ರಾಣೇಬೆನ್ನೂರು ಇವರು ಕಾಲುಬಾಯಿ ಜ್ವರದ ಲಕ್ಷಣಗಳು ಮತ್ತು ಲಸಿಕೆ ಹಾಕುವುದರ ಮಹತ್ವ ಕುರಿತು ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ವಿಷಯ ತಜ್ಞರಾದ ಡಾ. ಎಸ್.ವಾಯ್. ಮುಕರ್ತಾಳ ಇವರು ಮಾತನಾಡಿ ನೆರೆ ಪೀಡಿತ ಪ್ರದೇಶದಲ್ಲಿ ಎದುರಾಗಬಹುದಾದ ವಿವಿಧ ರೋಗಗಳು ಮತ್ತು ಅವುಗಳ ಹತೋಟಿ ಕುರಿತು ಮಾಹಿತಿ ನೀಡಿದರು.

ಒಟ್ಟು 250 ಜಾನುವಾರುಗಳಿಗೆ ಕಾಲುಬಾಯಿಜ್ವರದ ಲಸಿಕೆ ಹಾಕಿ ಚಿಕಿತ್ಸೆ ನೀಡಲಾಯಿತು. ಪಶುಸಂಗೋಪನಾ ಇಲಾಖೆಯ ಡಾ. ನೀಲಕಂಠ ಬ. ಅಂಗಡಿ ಪಶುವೈದ್ಯಾಧಿಕಾರಿಗಳು (ವಿಸ್ತರಣೆ), ಶ್ರೀ ಬಿ.ಎಚ್. ಗೋಗಚ್ಚಿ, ಶ್ರೀ ಪುಂಡಪ್ಪಾ ಲಮಾಣಿ ಮತ್ತು ಶ್ರೀ ಪಕ್ಕೀರಪ್ಪ ಕಳ್ಳಿಹಾರ ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಮುದ್ರಿತ ವಿಷಯ

ಗೆ,

ಪಿನ್ ಕೋಡ್



ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)



ಸಂಪಾದಕರು : ಡಾ. ಟಿ.ಎಂ. ಸೌಮ್ಯ
ಪ್ರಕಾಶಕರು : ಡಾ. ಎಂ.ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಹ ಸಂಪಾದಕರು :
ಶ್ರೀಮತಿ ಗೀತಾ ಕಳಕನವರ್, ಡಾ. ಎಸ್. ವೈ. ಮುಕರ್ತಾಳ, ಡಾ. ಬಿ. ಸಿ. ಹನುಮಂತಸ್ವಾಮಿ, ಡಾ. ಕೆ. ಬಿ. ಯಡಹಳ್ಳಿ, ಶ್ರೀ ವಿ.ಡಿ.ರಾಥೋಡ್, ಶ್ರೀ ಎಂ.ಎ. ಗದ್ದನಕೇರಿ, ಶ್ರೀಮತಿ ಸಾಯಿರಾಬಾನು ಎಂ., ಶ್ರೀ ವೆಂಕಟೇಶ ಹೊಸಮನಿ
ವಿನ್ಯಾಸ : ಕು. ರೇಖಾ ಕೆ.ಎನ್., ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ





ಕೃಷಿ ವಿಶ್ವವಿದ್ಯಾಲಯ, ಧಾರವಾಡ


# ವಾರ್ತಾ ಪತ್ರಿಕೆ


ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org
Email:kvk_haveri@rediffmail.com

ಅಕ್ಟೋಬರ್–ಡಿಸೆಂಬರ್, 2009 ಸಂಪುಟ–9 ಸಂಚಿಕೆ–3


## ಸಾವಯವ ಕೃಷಿಕರ ಕಾರ್ಯಾಗಾರ





ಕರ್ನಾಟಕ ಸಾವಯವ ಕೃಷಿ ಮಿಶನ್, ಕುಮದ್ವತಿ ಸಾವಯವ ಕೃಷಿ ಪರಿವಾರ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ರಾಣೇಬೆನ್ನೂರು ತಾಲ್ಲೂಕಿನ ಸಾವಯವ ಕೃಷಿಕರಿಗೆ ಒಂದು ದಿನದ "ಸಾವಯವ ಕೃಷಿಕರ ಕಾರ್ಯಾಗಾರ"ವನ್ನು ದಿನಾಂಕ 27–10–2009 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಜಿ. ಶಿವಣ್ಣ, ಮಾನ್ಯ ಶಾಸಕರು, ರಾಣೇಬೆನ್ನೂರು ಇವರು ಉದ್ಘಾಟಿಸಿದರು. ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಡಿ. ಪಿ. ಬಿರಾದರ್ ಹಾಗೂ ಸಸ್ಯ ರೋಗ ಶಾಸ್ತ್ರದ ಮುಖ್ಯಸ್ಥರಾದ ವಿ. ಐ. ಬೆಣಗಿಯವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದರು. ಶ್ರೀ ರಾಜಶೇಖರ ಸಿಂಧೂರ, ನಿರ್ದೇಶಕರು, ಸಾವಯವ ಕೃಷಿ ಮಿಶನ್ ಹಾಗೂ ಅಧ್ಯಕ್ಷರು ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮತ್ತು ಶ್ರೀ ಚನ್ನಬಸಪ್ಪ ಕೊಂಬಳಿ, ಜಿಲ್ಲಾ ಸಂಚಾಲಕರು ಸಾವಯವ ಕೃಷಿ ಪರಿವಾರ, ಹಾವೇರಿ ಜಿಲ್ಲೆ ಹಾಗೂ ಸುನೀತಾ ಎಸ್. ಗಂಗನಗೌಡರ್ ಮುದೇನೂರು, ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದರು. ಕಾರ್ಯಾಗಾರದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಪಾಲ್ಗೊಂಡು ರೈತರಿಗೆ ಸೂಕ್ತ ಮಾಹಿತಿ ನೀಡುವಲ್ಲಿ ಯಶಸ್ವಿಯಾದರು. ತಾಲ್ಲೂಕಿನ ವಿವಿಧ ಗ್ರಾಮಗಳ ಸುಮಾರು 250 ಕ್ಕೂ ಹೆಚ್ಚು ಸಾವಯವ ಕೃಷಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

## ನೆರೆ ಪೀಡಿತ ಪ್ರದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರ



ಉತ್ತರ ಕರ್ನಾಟಕದ ಹಲವೆಡೆ ಅಕ್ಟೋಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ಗ್ರಾಮಗಳಲ್ಲಿನ ರೈತರ ಸಂಕಷ್ಟಕ್ಕೆ ನೆರವಾಗಲು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯು ಮುಂದಾಗಿದ್ದು ರಾಣೇಬೆನ್ನೂರು ತಾಲ್ಲೂಕಿನ ಮುಷ್ಟೂರು ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮುಷ್ಟೂರು ಗ್ರಾಮದ ರೈತರಿಗೆ ನೆರವಾಗುವಂತೆ ಹಲವಾರು ತಾಂತ್ರಿಕ ಮಾಹಿತಿ ಶಿಬಿರಗಳನ್ನು, ಪಶು ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿ, ಕೃಷಿ ಪರಿಕರಗಳಾದ ಕಡಲೆ, ಸೂರ್ಯಕಾಂತಿ ಹಾಗೂ ಬದನೆ ಬೀಜ ಮತ್ತು ನುಗ್ಗೆ, ಸಪೋಟಾ ಹಾಗೂ ಕರಿಬೇವಿನ ಸಸಿಗಳನ್ನು ವಿತರಿಸಲಾಯಿತು.








## ಕ್ಷೇತ್ರೋತ್ಸವ



ಆಸ್ಟರ್ (ಕಾಮಿನಿ) , ದಿನಾಂಕ : 26–10–2009
ಸ್ಥಳ: ಅಸುಂಡಿ, ತಾ: ರಾಣೇಬೆನ್ನೂರು

ನವಣೆ (ಹೆಚ್.ಎಂ.ಟಿ.100–1) ದಿನಾಂಕ : 13–11–2009
ಸ್ಥಳ: ನೆಗಳೂರು, ತಾ: ಹಾವೇರಿ





ಬಿ.ಟಿ. ಹತ್ತಿ, ದಿನಾಂಕ : 21–11–09
ಸ್ಥಳ: ಅಗಡಿ, ತಾ: ಹಾವೇರಿ

ತೊಗರಿ ನಾಟಿ ಪದ್ಧತಿ, ದಿನಾಂಕ : 29–12–09
ಸ್ಥಳ: ಯರೇಕುಪ್ಪಿ, ತಾ: ರಾಣೇಬೆನ್ನೂರು

## ವಿಶೇಷ ದಿನಗಳ ಆದರಣೆ



ದಿನಾಂಕ : 15–10–2009
ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನಾಚರಣೆ



ದಿನಾಂಕ : 04–12–2009
ಕೃಷಿ ನಿರತ ಮಹಿಳೆಯರ ದಿನಾಚರಣೆ



ದಿನಾಂಕ : 23–12–2009
ರೈತರ ದಿನಾಚರಣೆ

## ತರಬೇತಿ ಕಾರ್ಯಕ್ರಮಗಳು



ರಾಣೇಬೆನ್ನೂರು ತಾಲ್ಲೂಕಿನ ಚಿಕ್ಕಮಾಗನೂರು ಗ್ರಾಮದಲ್ಲಿ ದಿನಾಂಕ 28/10/2009 ರಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ)ಯ ಸಹಯೋಗದಲ್ಲಿ ಶ್ರೀ ಪದ್ಧತಿಯಲ್ಲಿ ಭತ್ತದ ಬೇಸಾಯ ಕುರಿತ ತರಬೇತಿ ಕಾರ್ಯಕ್ರಮ











ದಿನಾಂಕ 14/10/2009 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಆವರಣದಲ್ಲಿ ರೈತ ಮಹಿಳೆಯರಿಗಾಗಿ ಫಿನಾಯಿಲ್ ಹಾಗೂ ಸೋಪಿನ ಆಯಿಲ್ ತಯಾರಿಕೆ ತರಬೇತಿ.



## ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರ









ಕೆ.ಎಲ್.ಇ. ಸೊಸೈಟಿಯ ಶ್ರೀ ರಾಜರಾಜೇಶ್ವರಿ ಬಾಲಕಿಯರ ಪದವಿ ಪೂರ್ವ ಕಾಲೇಜ್, ರಾಣೇಬೆನ್ನೂರು ಇವರು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಆವರಣದಲ್ಲಿ ದಿನಾಂಕ 26–11–2009 ರಿಂದ 02–12–09 ರವರೆಗೆ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಸ್ತರಣಾ ನಿರ್ದೇಶಕರಾದ ಡಾ. ಆರ್. ಆರ್. ಹಂಚಿನಾಳ ರವರು ನೆರವೇರಿಸಿದರು. ಧಾರವಾಡದ ವಿಸ್ತರಣಾ ನಿರ್ದೇಶನಾಲಯದ ತಾಂತ್ರಿಕ ಸಲಹೆಗಾರರಾದ ಡಾ. ಪಿ.ಎಸ್. ಹೂಗಾರ್ ರವರು ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ತಾಂತ್ರಿಕ ಮಾಹಿತಿಗಳ ಸದುಪಯೋಗ ಪಡೆದುಕೊಳ್ಳುವಂತೆ ವಿದ್ಯಾರ್ಥಿನಿಯರಿಗೆ ತಿಳಿಸಿದರು. ಒಂದು ವಾರದ ಶಿಬಿರದ ಅವಧಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ವಿದ್ಯಾರ್ಥಿನಿಯರಿಗೆ ಉಪಯುಕ್ತವಾದ ವಿಷಯಗಳ ಕುರಿತು ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ನಡೆಸಿದರು.

## ಕೃಷಿ ಮಾಹಿತಿ ಸಪ್ತಾಹ





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ 23/11/2009 ರಿಂದ 27/11/2009 ರವರೆಗೆ ಕೃಷಿ ಮಾಹಿತಿ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಎಲ್.ಎಸ್. ಅಜಗಣ್ಣನವರ್, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಣೇಬೆನ್ನೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯವಾಗಿ ದ್ವಿದಳ ಧಾನ್ಯ ಹಾಗೂ ಎಣ್ಣೆ ಕಾಳು ಬೆಳೆಗಳ ಸಮಗ್ರ ನಿರ್ವಹಣೆ, ಮಳೆನೀರು ಕೊಯ್ಲು, ಮಣ್ಣು ಮತ್ತು ನೀರು ಸಂರಕ್ಷಣೆ, ನೀರು ಮತ್ತು ಮಣ್ಣಿನ ಪರೀಕ್ಷೆಯ ಮಹತ್ವ, ಖುಷ್ಕಿ ತೋಟಗಾರಿಕೆ, ಹಣ್ಣು ಮತ್ತು ತರಕಾರಿ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು, ಸಾವಯವ ತೋಟಗಾರಿಕೆ, ಸುಧಾರಿತ ಹೈನುಗಾರಿಕೆ, ಕುರಿ ಮತ್ತು ಕೋಳಿ ಸಾಕಾಣಿಕೆ, ಜೈವಿಕ ಪೀಡೆ ನಾಶಕಗಳ ಮಹತ್ವ ಹಾಗೂ ಸ್ವ ಸಹಾಯ ಗುಂಪುಗಳ ಅಭಿವೃದ್ಧಿ ಕುರಿತು ಮಾಹಿತಿ ನೀಡಲಾಯಿತು. ವಿವಿಧ ವಿಷಯಗಳನ್ನು ಕುರಿತು ಮಾಹಿತಿ ನೀಡಲು ಪರಿಣಿತಿ ಹೊಂದಿರುವ ಪ್ರಗತಿಪರ ರೈತರು, ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರೇತರ ಸಂಘಗಳ ಅಧಿಕಾರಿಗಳು ಹಾಗೂ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಜ್ಞಾನಿಗಳನ್ನು ಆಹ್ವಾನಿಸಲಾಗಿತ್ತು.

ಕೃಷಿ ಇಲಾಖೆ, ಹಾವೇರಿ ಜಿಲ್ಲೆ ಆಯೋಜಿಸಿದ್ದ ಹೋಬಳಿ ಮಟ್ಟದ ಕೃಷಿ ಮಾಹಿತಿ ಸಪ್ತಾಹಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.